# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 58 (73) |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27.01.2026 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಾರ್ವಜನಿಕ ಭೂಮಿ ಮತ್ತು ಜಲಮೂಲಗಳ (PUBLIC land and water bodies) ಮೇಲಿನ ಅಕ್ರಮ ನಿರ್ಮಾಣಗಳು ಹಾಗೂ ಅತಿಕ್ರಮಣ ಸೇರಿದಂತೆ ಯೋಜಿತವಲ್ಲದ ಮತ್ತು ಅನಿಯಂತ್ರಿತ ನಗರ ಬೆಳವಣಿಗೆಯ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ' | ಅನಿಯಂತ್ರಿತ ನಗರ ಬೆಳವಣಿಗೆಯನ್ನು ತಡೆಗಟ್ಟಲು ಮತ್ತು ಜಲಮೂಲಗಳನ್ನು ಸಂರಕ್ಷಿಸಲು ಸರ್ಕಾರವು ಕೆಳಗಿನ ಕಾನೂನಾತ್ಮಾಕ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಜಾರಿಗೊಳಿಸಿದೆ.<br>1. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2014 (Karnataka Tank Conservation and development Authority Act -2014) ಅನ್ವಯ ಯಾವುದೇ ಜಲಕಾಯಗಳ (ಕೆರೆ ಕಟ್ಟೆ ಇತ್ಯಾದಿ) ಸುತ್ತಲೂ 30.00 ಮೀಟರ್ ಗಳಷ್ಟು ಜಾಗವನ್ನು ಬಫರ್ ವಲಯ (Buffer Zone) ಎಂದು ಕಡ್ಡಾಯವಾಗಿ ಕಾಯ್ದಿರಿಸಲಾಗುತ್ತದೆ. ಈ ವಲಯದಲ್ಲಿ ಯಾವುದೇ ಶಾಶ್ವತ ನಿರ್ಮಾಣಗಳನ್ನು ನಿಷೇಧಿಸಲಾಗಿದೆ.<br>2. ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ ಗ್ರಾಮೀಣ ಭಾಗಗಳಲ್ಲಿ ಅಥವಾ ನಗರದ ಹೊರವಲಯಗಳಲ್ಲಿ ಅಭಿವೃದ್ಧಿಯಾಗುವ ಬಡಾವಣೆಗಳಿಗೆ ಸಂಬಂಧಿಸಿದಂತೆ 'ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4-ಕೆ (Section 4-K) ಅಡಿಯಲ್ಲಿ ನಿಯಮಾವಳಿಗಳನ್ನು ರೂಪಿಸಲಾಗಿದೆ ಇದರ ಪ್ರಕಾರ, ಅನುಮೋದನೆಗೊಳ್ಳುವ ಯಾವುದೇ ವಿನ್ಯಾಸ ನಕ್ಷೆಗಳಲ್ಲಿ ಜಲಮೂಲಗಳಿಂದ ಕನಿಷ್ಟ 30.00 ಮೀಟರ್ ಅಂತರವನ್ನು ಕಾಯ್ದಿರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. |

| | | |
|---|---|---|
| | | 3. ಮಹಾಯೋಜನೆಗಳಲ್ಲಿ (Master Plans) ಜಲಮೂಲಗಳನ್ನು ಮತ್ತು ಸಾರ್ವಜನಿಕ ಬಳಕೆಯ ಜಮೀನುಗಳನ್ನು ಗುರುತಿಸಲಾಗುತ್ತಿದೆ. ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಹಂತದಲ್ಲೇ ಜಲಕಾಯಗಳು (Water bodies) ಒತ್ತುವರಿಯಾಗದಂತೆ ನಕ್ಷೆಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ನಡೆಸಿದ ನಂತರವೇ ಪ್ರಾಧಿಕಾರಗಳಿಂದ ಅನುಮೋದನೆ ನೀಡಲಾಗುತ್ತಿದೆ. |
| ಆ) | 2026 ಅಂತ್ಯಕ್ಕೆ ನಗರ ಬಳಕೆಗೆ ಅಂದಾಜು ಭೂಮಿಯ ಅವಶ್ಯಕತೆಗಳಿಗೆ ಅನುಗುಣವಾಗಿ ಮಾಸ್ಟರ್ ಪ್ಲಾನ್‌ಗಳು ಮತ್ತು ಭೂ-ಬಳಕೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ ಎಂದು ಸರ್ಕಾರ ಹೇಗೆ ಖಚಿತಪಡಿಸುತ್ತದೆ. | ಭವಿಷ್ಯದ ಜನ ಸಂಖ್ಯೆ ಮತ್ತು ನಗರೀಕರಣದ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಸರ್ಕಾರವು ಈ ಕೆಳಗಿನ ಪ್ರಕ್ರಿಯೆಗಳ ಮೂಲಕ ಯೋಜಿತ ಬೆಳವಣಿಗೆಯನ್ನು ಖಚಿತಪಡಿಸುತ್ತಿದೆ.<br>1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ) ಅಡಿಯಲ್ಲಿ ವೇಗವಾಗಿ ಬೆಳೆಯುತ್ತಿರುವ ಪ್ರದೇಶಗಳನ್ನು ಸ್ಥಳೀಯ ಯೋಜನಾ ಪ್ರದೇಶಗಳೆಂದು ಘೋಷಿಸಲಾಗುತ್ತದೆ. ನಂತರ ಕಲಂ 9ರ ಅಡಿಯಲ್ಲಿ ಮುಂದಿನ 10-15 ವರ್ಷಗಳ ಜನ ಸಂಖ್ಯೆ ಮತ್ತು ಭೂಮಿಯ ಬೇಡಿಕೆಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಮಹಾಯೋಜನೆಯನ್ನು (Master Plan) ಸಿದ್ದಪಡಿಸಲಾಗುತ್ತದೆ.<br>2. ಮಹಾಯೋಜನೆಯಲ್ಲಿ ವಸತಿ, ವಾಣಿಜ್ಯ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದೇಶಗಳಿಗೆ ಪ್ರತ್ಯೇಕ ವಲಯಗಳನ್ನುನಿಗಧಿಪಡಿಸಲಾಗುತ್ತದೆ.<br>3. ಯೋಜನಾ ಪ್ರಾಧಿಕಾರದ ಸಭೆಗಳಲ್ಲಿ ಅನುಮೋದಿತ ಮಹಾಯೋಜನೆ ಮತ್ತು ವಲಯ ನಿಯಮಾವಳಿಗಳಿಗೆ (Zonal Regulations) ವಿರುದ್ಧವಾಗಿರುವ ಯಾವುದೇ ಅಭಿವೃದ್ಧಿಗಳಿಗೆ ಅನುಮತಿ ನೀಡದಂತೆ ಮತ್ತು ಅಕ್ರಮ ನಿರ್ಮಾಣಗಳು ಬಾರದಂತೆ ಕ್ರಮವಹಿಸಲಾಗುತ್ತಿದೆ. |
| ಇ) | ರಾಜ್ಯದಲ್ಲಿ ರಿಯಲ್ ಎಸ್ಟೇಟ್ ಅಭಿವೃದ್ಧಿಯ ಒತ್ತಡದ ನಡುವೆಯೂ ಪರಿಸರ ಸುಸ್ಥಿರತೆಗೆ ಅತ್ಯಗತ್ಯವಾದ ಉದ್ಯಾನವನಗಳು ಮತ್ತು ನೈಸರ್ಗಿಕ ಭೂ ದೃಶ್ಯಗಳನ್ನು ಸಂರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ನಗರ / ಪಟ್ಟಣಗಳ ಯೋಜಿತ ಮತ್ತು ಕ್ರಮಬದ್ಧ ಬೆಳವಣಿಗೆಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಕಲಂ 4(ಎ) ರಂತೆ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿರುವ ಪ್ರದೇಶಗಳಿಗೆ ಕಲಂ 9 ರಡಿಯಲ್ಲಿ ಮಹಾಯೋಜನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆಯನ್ನು ನೀಡಲಾಗುತ್ತಿದ್ದು, ಸದರಿ ಮಹಾಯಯೋಜನೆಯಲ್ಲಿ ಪರಿಸರದ ಸುಸ್ಥಿರ |

| | | |
|---|---|---|
| | | ಬೆಳವಣಿಗೆಗಳಿಗಾಗಿ ಉದ್ಯಾನವನ ಮತ್ತು ಬಯಲುಜಾಗೆ/ ಬಫರ್ ವಲಯಗಳನ್ನು ಅಳಡಿಸಲಾಗುತ್ತಿದೆ. ಅಲ್ಲದೇ ಯೋಜನಾ ಪ್ರಾಧಿಕಾರಗಳಿಂದ ಅನುಮೋದಿಸಲಾಗುತ್ತಿರುವ ವಿನ್ಯಾಸ ನಕ್ಷೆಗಳಲ್ಲಿ ಶೇಕಡಾ. 10 ರಷ್ಟು ಉದ್ಯಾನವನ ಜಾಗೆಗಳನ್ನು ಕಾಯ್ದಿರಿಸುತ್ತಿದ್ದು, ಇದರಿಂದಾಗಿ ಪರಿಸರದ ಸುಸ್ಥಿರ ಬೆಳವಣಿಗೆಗೆ ಸಹಕಾರಿಯಾಗಿರುತ್ತದೆ. |

**ಸಂಖ್ಯೆ: ನಅಇ 23 ಬೆಂರೂಪ್ರಾ 2026 (ಇ-ಕಡತ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು